# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | 10 (16) |
| **ಸದಸ್ಯರ ಹೆಸರು** | ಶ್ರೀ ಕೆ.ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ** | 29.01.2021 |

| ಕ್ರಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ. | ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆ ಯಡಿಯಲ್ಲಿ ಪ್ರತಿ ಗ್ರಾಮಗಳ ಅಭಿವೃದ್ಧಿಗೆ ವಿಧಾನ ಪರಿಷತ್ತು ಶಾಸಕರುಗಳ ಕೋಟಾದಡಿಯಲ್ಲಿ 2018-19, 2019-20, 2020-21 ನೇ ಸಾಲಿನಲ್ಲಿ ಅನುದಾನ ಹಂಚಿಕೆಯಾಗಿದೆಯೇ; (ವರ್ಷಾವಾರು ಹಂಚಿಕೆಯಾದ ವಿವರ ಒದಗಿಸುವುದು) | • ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆಯಡಿ 2018-19, 2019-20 ಹಾಗೂ 2020-21ನೇ ಸಾಲಿನಲ್ಲಿ ಹೊಸದಾಗಿ ಯಾವುದೇ ಗ್ರಾಮಗಳನ್ನು ಆಯ್ಕೆ ಮಾಡಿ ಅನುದಾನವನ್ನು ಹಂಚಿಕೆ ಮಾಡಿರುವುದಿಲ್ಲ. ಈ ಯೋಜನೆಯಡಿ ಗ್ರಾಮಗಳ ಆಯ್ಕೆ ಮಾಡಿ ಅನುದಾನ ಮಂಜೂರು ಮಾಡಿರುವ ವರ್ಷ 2017-18 ಆಗಿರುತ್ತದೆ.<br>• ಆಯ್ಕೆಯಾದ ಪ್ರತಿ ಗ್ರಾಮವನ್ನು ರೂ.1.00ಕೋಟಿ ಅನುದಾನದಂತೆ 1000 ಗ್ರಾಮಗಳನ್ನು ರೂ.1000.00 ಕೋಟಿಗಳ ಮೊತ್ತದಲ್ಲಿ ಮೂರು ವರ್ಷ ಕಾಲಾವಧಿಯಲ್ಲಿ ಅಭಿವೃದ್ಧಿಪಡಿಸುವ ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆಯನ್ನು 2017-18ನೇ ಸಾಲಿನಲ್ಲಿ ಆರಂಭಿಸಿ ಅದೇ ವರ್ಷದಲ್ಲಿ 991 ಗ್ರಾಮಗಳನ್ನು ಆಯ್ಕೆ ಮಾಡಲಾಗಿದ್ದು, ನಂತರ ಯಾವುದೇ ಗ್ರಾಮಗಳ ಆಯ್ಕೆ ನಡೆದಿರುವುದಿಲ್ಲ.<br>• ಈ ಯೋಜನೆಯಡಿ ಮಾನ್ಯ ವಿಧಾನ ಪರಿಷತ್ ಸದಸ್ಯರಿಗೆ ತಲಾ ಒಂದು ಗ್ರಾಮವನ್ನು ಆಯ್ಕೆ ಮಾಡಲು ಅವಕಾಶ ಕಲ್ಪಿಸಿ ಅದರಂತೆ, ಗ್ರಾಮಗಳನ್ನು ಆಯ್ಕೆ ಮಾಡಿ ಅನುದಾನವನ್ನು ಹಂಚಿಕೆ ಮಾಡಲಾಗಿರುತ್ತದೆ.<br>• ಒಟ್ಟು ಯೋಜನೆಗೆ ನಿಗದಿಪಡಿಸಿದ ಅನುದಾನ ಮತ್ತು ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಹಾಗೂ ವೆಚ್ಚ ಮಾಡಿದ ವಿವರಗಳನ್ನು **ಅನುಬಂಧದಲ್ಲಿ ನೀಡಿದೆ.** |
| ಆ. | ಇಲ್ಲವಾದಲ್ಲಿ ಯಾವಾಗ ಅನುದಾನ ನೀಡಲಾಗುವುದು? (ಮಾಹಿತಿ ನೀಡುವುದು) | 2017-18ನೇ ಸಾಲಿನಿಂದ ಆರಂಭಿಸಿರುವ ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆಗೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ. |

ಕಡತ ಸಂಖ್ಯೆ ಗ್ರಾಅಪ:ಅಧಿ- :ಆರ್‌ಆರ್‌ಸಿ:2020

**(ಕೆ.ಎಸ್.ಈಶ್ವರಪ್ಪ)**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

# ಅನುಬಂಧ

## ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ಇದುವರೆಗೂ ಬಿಡುಗಡೆಯಾದ ಅನುದಾನದ ವಿವರ

ರೂ.ಲಕ್ಷಗಳಲ್ಲಿ

| ಕ್ರ.ಸಂ | ವರ್ಷ | ಹಂಚಿಕೆ | ಬಿಡುಗಡೆಯಾದ ಅನುದಾನ | ವೆಚ್ಚ | ಬಾಕಿ ಬಿಡುಗಡೆ |
|---|---|---|---|---|---|
| 01 | 2017-18 | 17010.00 | 17010.00 | 17010.00 | 26457.00 |
| 02 | 2018-19 | 26283.00 | 26283.00 | 26283.00 | |
| 03 | 2019-20 | 2000.00 | 2000.00 | 2000.00 | |
| 04 | 2020-21 | 18207.00 | 10250.00* | 10250.00 | |
| | ಒಟ್ಟು | 81500.00 | 73543.00 | 73543.00 | 26457.00 |

* 2020-21ನೇ ಸಾಲಿನ ಡಿಸೆಂಬರ್ ಅಂತ್ಯಕ್ಕೆ